**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ, ಬೆಂಗಳೂರು-560 001**

ಸಂಖ್ಯೆ: ಸಿ8(2)ಶಾಶಿಅ.ಸೇವಾಭದ್ರತೆ-118/2008-09 ದಿನಾಂಕ:18-06-2011

**ಜ್ಞಾಪನ**

ವಿಷಯ:- ಮಾನ್ಯತೆ ನವೀಕರಣ ಮತ್ತು ಶಿಕ್ಷಕರಿಗೆ ಸೇವಾ ಭದ್ರತೆಯನ್ನು ಒದಗಿಸುವ ಸಂಬಂಧ ಮುಂದುವರೆದ ಸೂಚನೆಗಳು

ಉಲ್ಲೇಖ:-1.ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮ 36, 38 ಮತ್ತು 39
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ವಿವಿಧ 98 ದಿ:04.11.1999
3.ಸರ್ಕಾರದ ಆದೇಶ ಸಂಖ್ಯೆ: ಇಡಿ 104 ಎಸ್ಇಪಿ 2005.ದಿ:12.01.2006
4.ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 208 ಎಸ್ಇಪಿ 2007 ದಿ:12.10.2007
5. ಈ ಕಛೇರಿಯ ಪತ್ರ ಸಮಸಂಖ್ಯೆ ದಿನಾಂಕ:01.02.2011 ಮತ್ತು ದಿ:09.05.2011

---000---

ಅನುದಾನಿತ ಶಾಲೆಗಳು ಮತ್ತು ಖಾಸಗಿ ಶಾಲೆಗಳು ನಿಯಮಿತವಾಗಿ ಮಾನ್ಯತೆಯನ್ನು ನವೀಕರಣ ಮಾಡಿಕೊಳ್ಳಬೇಕು ಎಂಬ ಕುರಿತು ಉಲ್ಲೇಖ-1 ಮತ್ತು 2 ರಲ್ಲಿ ಸೂಚಿಸಲಾಗಿದೆ. ಆದರೆ ಅನುದಾನಿತ ಶಾಲೆಗಳ ವಿವಿಧ ಕೋರಿಕೆಗಳ ಪ್ರಸ್ತಾವನೆಗಳನ್ನು ಗಮನಿಸಿದಾಗ ಕಂಡುಬಂದಂತೆ ಅನೇಕ ವರ್ಷಗಳಿಂದ ಶಾಲೆಗಳ ಮಾನ್ಯತೆಯನ್ನು ನವೀಕರಿಸಿಕೊಂಡಿರುವುದಿಲ್ಲ. ಇಂತಹ ಶಾಲೆಗಳನ್ನು ಮುಂದುವರೆಸುವುದು ಮತ್ತು ಅನುದಾನ ನೀಡುವುದು ನಿಯಮಬಾಹಿರ, ಆದ್ದರಿಂದ ಇನ್ನು ಒಂದು ತಿಂಗಳೊಳಗಾಗಿ ಎಲ್ಲಾ ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಶಾಲೆಗಳ ಮಾನ್ಯತೆಯನ್ನು ನವೀಕರಿಸಿಕೊಂಡಿರುವರೇ ಎಂಬ ಬಗ್ಗೆ ಪರಿಶೀಲನೆ ನಡೆಸಿ ಮಾನ್ಯತೆ ಪ್ರಸ್ತಾವನೆಯನ್ನು ಪಡೆದು ನವೀಕರಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಒಂದು ವೇಳೆ ಮಾನ್ಯತೆಯನ್ನು ನವೀಕರಿಸಿಕೊಳ್ಳಲು ವಿಫಲವಾದ ಶಾಲೆಗಳ ವಿರುದ್ಧ ನೋಟೀಸನ್ನು ಜಾರಿ ಮಾಡಿ ಶಿಕ್ಷಣ ಕಾಯ್ದೆ ನಿಯಮಗಳನುಸಾರ ಕ್ರಮ ಜರುಗಿಸಿ ವರದಿ ಮಾಡತಕ್ಕದ್ದು.ಕೈಗೊಂಡ ಕ್ರಮ ಕುರಿತು ದಿನಾಂಕ:-20-07-2011 ರೊಳಗೆ ಇದರೊಡನೆ ಲಗತ್ತಿಸಿರುವ ಪ್ರಪತ್ರದಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಪ್ರಾಥಮಿಕ ಶಾಲೆಗಳ ವಿವರಗಳನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರಿಗೂ ಮತ್ತು ಪ್ರೌಢಶಾಲೆಗಳ ವಿವರಗಳನ್ನು ನಿರ್ದೇಶಕರು (ಪ್ರೌಢಶಿಕ್ಷಣ) ಇವರುಗಳಿಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

ಉಲ್ಲೇಖ-3 ಮತ್ತು 4 ರ ಸರ್ಕಾರದ ಆದೇಶ ಮತ್ತು ಸುತ್ತೋಲೆಗಳ ಪ್ರಕಾರ ಅನುದಾನ ರಹಿತ ಶಾಲೆಗಳ ನೌಕರರಿಗೆ ಸೇವಾಭದ್ರತೆಯನ್ನು ಕಾಪಾಡಬೇಕೆಂದು ಸೂಚನೆಯನ್ನು ನೀಡಲಾಗಿರುತ್ತದೆ. ಇದರನ್ವಯ ಮಾಹಿತಿಗಳನ್ನು ನೀಡಲು ಉಲ್ಲೇಖ-5 ರ ಪತ್ರಗಳಲ್ಲಿ ನಿಮಗೆ ಸೂಚಿಸಲಾಗಿತ್ತು ಆದಾಗ್ಯೂ ಅಪೂರ್ಣ ಮಾಹಿತಿಗಳನ್ನು ಕಳುಹಿಸಿರುವಿರಿ, ಇದು ಸರಿಯಲ್ಲ. ಆದ್ದರಿಂದ ಮಾನ್ಯತೆ ನೀಡುವ ಸಮಯದಲ್ಲಿ ಅಥವಾ ಈಗಾಗಲೇ ಮಾನ್ಯತೆಯನ್ನು ತೆಗೆದುಕೊಂಡಿರುವ ಪ್ರಕರಣಗಳಲ್ಲಿ ನೌಕರರ ಪಾಸ್ ಪುಸ್ತಕ, ಸೇವಾಪುಸ್ತಕಗಳನ್ನು ಜವಾಬ್ದಾರಿಯುತ ಅಧಿಕಾರಿಯೊಬ್ಬರು ಅವುಗಳನ್ನು ಈಗಾಗಲೇ ನೀಡಿರುವ ನಮೂನೆಯಲ್ಲಿ ಪರಿಶೀಲಿಸಿ ವರದಿ ನೀಡಬೇಕೆಂದು ಸೂಚಿಸಲಾಗಿದೆ. ಸೇವಾಭದ್ರತೆ ಕುರಿತು ಕಾರ್ಯಾನುಸರಣೆಯನ್ನು ಮಾಡುತ್ತಿರುವ ಶಾಲೆಗಳ ಪಟ್ಟಿ ಮತ್ತು ಕಾರ್ಯಾನುಸರಣೆಯನ್ನು ಮಾಡದೇ ಇರುವ ಶಾಲೆಗಳ ಪಟ್ಟಿಯನ್ನು ದಿನಾಂಕ:-20-07-2011 ರೊಳಗೆ ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಮತ್ತು ನಿರ್ದೇಶಕರು (ಪ್ರೌಢಶಿಕ್ಷಣ) ಇವರಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

18.6.11

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ
1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳಿಗೆ
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
3. ಕಛೇರಿ ಪ್ರತಿ C:\Users\ACER\Documents\LETTERS_SUNDAR.doc

**ಪ್ರಪತ್ರ**

**(ಪ್ರಾಥಮಿಕ ಶಿಕ್ಷಣ)**

| | | | ಅನುದಾನಿತ ಪ್ರಾಥಮಿಕ ಶಾಲೆಗಳ ಮಾನ್ಯತೆ | | | ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಮಾನ್ಯತೆ | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಮಾನ್ಯತೆ ಪಡೆದ ಅನುದಾನಿತ ಪ್ರಾಥಮಿಕ ಶಾಲೆಗಳ ಹೆಸರು ಮತ್ತು ವಿಳಾಸ ಎಲ್ಲಿಯವರೆಗೆ ಮಾನ್ಯತೆ ನವೀಕರಿಸಿದೆ | ಮಾನ್ಯತೆ ಪಡೆಯದ ಅನುದಾನಿತ ಪ್ರಾಥಮಿಕ ಶಾಲೆಗಳ ಹೆಸರು ಮತ್ತು ವಿಳಾಸ | ನವೀಕರಣ ಮಾಡದೇ ಇರಲು ಕಾರಣ | ಮಾನ್ಯತೆ ಪಡೆದ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಹೆಸರು ಮತ್ತು ವಿಳಾಸ ಎಲ್ಲಿಯವರೆಗೆ ಮಾನ್ಯತೆ ನವೀಕರಿಸಿದೆ | ಮಾನ್ಯತೆ ಪಡೆಯದ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಹೆಸರು ಮತ್ತು ವಿಳಾಸ | ನವೀಕರಣ ಮಾಡದೇ ಇರಲು ಕಾರಣ |

**ಪ್ರಪತ್ರ**

**(ಪ್ರೌಢ ಶಿಕ್ಷಣ)**

| | | | ಅನುದಾನಿತ ಪ್ರೌಢ ಶಾಲೆಗಳ ಮಾನ್ಯತೆ | | | ಅನುದಾನ ರಹಿತ ಪ್ರೌಢ ಶಾಲೆಗಳ ಮಾನ್ಯತೆ | | |
|---|---|---|---|---|---|---|---|---|
| ಕ್ರ.ಸಂ | ಜಿಲ್ಲೆ ಮತ್ತು ತಾಲ್ಲೂಕಿನ ಹೆಸರು | ತಾಲ್ಲೂಕಿನ ಹೆಸರು | ಮಾನ್ಯತೆ ಪಡೆದ ಅನುದಾನಿತ ಪ್ರೌಢ ಶಾಲೆಗಳ ಹೆಸರು ಮತ್ತು ವಿಳಾಸ ಎಲ್ಲಿಯವರೆಗೆ ಮಾನ್ಯತೆ ನವೀಕರಿಸಲಾಗಿದೆ. | ಮಾನ್ಯತೆ ನವೀಕರಿಸದೆ ಇರುವ ಅನುದಾನಿತ ಪ್ರೌಢ ಶಾಲೆಗಳ ಹೆಸರು ಮತ್ತು ವಿಳಾಸ | ನವೀಕರಣ ಮಾಡದೇ ಇರಲು ಕಾರಣ | ಮಾನ್ಯತೆ ಪಡೆದ ಅನುದಾನ ರಹಿತ ಪ್ರೌಢ ಶಾಲೆಗಳ ಹೆಸರು ಮತ್ತು ವಿಳಾಸ ಎಲ್ಲಿಯವರೆಗೆ ಮಾನ್ಯತೆ ನವೀಕರಿಸಿದೆ | ಮಾನ್ಯತೆ ನವೀಕರಿಸದ ಅನುದಾನ ರಹಿತ ಪ್ರೌಢ ಶಾಲೆಗಳ ಹೆಸರು ಮತ್ತು ವಿಳಾಸ | ನವೀಕರಣ ಮಾಡದೇ ಇರಲು ಕಾರಣ |

ಸೂಚನೆ:–ಪ್ರಾಥಮಿಕ ಶಿಕ್ಷಣಕ್ಕೆ ಸಂಬಂದಿಸಿದ ವಿವರಗಳನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರಿಗೆ ಪ್ರೌಢಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಿರ್ದೇಶಕರು (ಪ್ರೌಢಶಿಕ್ಷಣ) ಇವರಿಗೆ ಪ್ರತ್ಯೇಕವಾಗಿ ಸಲ್ಲಿಸಬೇಕು